# QUESTION BANK

## SUBJECT : KANNADA CLASS : IX

---

### ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

ಸತ್ಯಾಗ್ರಹವು ಒಂದು ಪ್ರಬಲವಾದ ಅಸ್ತ್ರ.ಅದನ್ನು ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಉಪಯೋಗಿಸಬಹುದು. ನಮ್ಮ ವೈರಿಗಳು, ಮಿತ್ರರು, ಸಂಬಂಧಿಕರು, ಅಪರಿಚಿತರು, ವ್ಯಕ್ತಿಗಳು ಅಥವಾ ಸಂಸ್ಥೆಗಳು – ಹೀಗೆ ಯಾರೇ ಆಗಲಿ ನಮಗೆ ಅನ್ಯಾಯ ಮಾಡಿದರೆ, ಈ ಅಸ್ತ್ರವನ್ನು ಅಹಿಂಸಾತ್ಮಕ ರೀತಿಯಲ್ಲಿ ಬಳಸಬಹುದು ಎಂದು ಗಾಂಧೀಜಿಯವರು ಸಾರಿ ಸಾರಿ ಹೇಳಿದ್ದಾರೆ. ಗುಜರಾಥ ಪ್ರಾಂತದ ಖೇಡಾ ಜಿಲ್ಲೆಗೆ ಸೇರಿದ ಧರ್ಮಜ ಎಂಬ ಹಳ್ಳಿಯಲ್ಲಿ ನಡೆದ ಸತ್ಯಾಗ್ರಹ ಇದಕ್ಕೆ ಒಂದು ಉದಾಹರಣೆ. ಒಂದು ದುಷ್ಟ ರೂಢಿಯನ್ನು ಹೋಗಲಾಡಿಸಲು ಯುವಕರು ಇದನ್ನು ಹೂಡಿದ್ದರು.

ಆ ಊರಿನ ಒಬ್ಬ ಪ್ರಮುಖ ನಾಗರಿಕನು ತನ್ನ ತಾಯಿ ಸತ್ತ ಹನ್ನೆರಡನೆಯ ದಿನ ಊರಿಗೆಲ್ಲ ಒಂದು ಊಟವನ್ನು ಹಾಕಬೇಕೆಂದು ಮಾಡಿದ್ದನು.ಈ ಹಳೆಯ ಅರ್ಥರಹಿತ ರೂಢಿಯನ್ನು ನಿಲ್ಲಿಸಬೇಕೆಂದು ಅಲ್ಲಿಯ ತರುಣರು ನಿರ್ಧರಿಸಿದರು.ಒಳ್ಳೆಯ ಮಾತಿನಿಂದ ಆ ನಾಗರಿಕನ ಮನವೊಲಿಸಲು ಯತ್ನಿಸಿದರು. ಅದು ಯಶಸ್ವಿಯಾಗಲಿಲ್ಲ. ಆಗ ಎಲ್ಲ ತರುಣರು ಕೂಡಿ ಆ ಸಮಾರಂಭದಲ್ಲಿ ತಾವು ಭಾಗವಹಿಸಬಾರದೆಂದೂ, ಅಲ್ಲಿಯ ಆಹಾರಕ್ಕೆ ಕೈಹಚ್ಚಬಾರದೆಂದೂ , ಆ ದಿನವಿಡೀ ಉಪವಾಸವಿರಬೇಕೆಂದೂ ನಿರ್ಧರಿಸಿದರು. ಹೀಗೆ ಮಾಡಿದಾಗ ಹಿರಿಯರು ತಮಗೆ ಏನಾದರೂ ಶಿಕ್ಷೆ ಕೊಟ್ಟರೆ ಶಾಂತವಾಗಿ ಸಹಿಸಬೇಕೆಂದು ನಿರ್ಣಯಿಸಿದರು.ಇದರಿಂದ ಉತ್ತಮ ಪರಿಣಾಮವೇ ಆಯಿತು.

ಊರಿನ ಊಟದ ದಿವಸ ಸುಮಾರು ಮುನ್ನೂರು ವಿದ್ಯಾರ್ಥಿಗಳು ಹಾಗೂ ಚಿಕ್ಕಮಕ್ಕಳು ಉಪವಾಸ ಮಾಡಿಯೇಬಿಟ್ಟರು. ಹಿರಿಯರು ಬಹಳ ಸಿಟ್ಟಾದರು. ಆದರೆ ತಮ್ಮ ಮಕ್ಕಳು ಯಾವ ಶಿಕ್ಷೆಗೂ ತಯಾರಾಗಿರುವುದನ್ನು ನೋಡಿ, ಅವರಿಗೆ ಶಿಕ್ಷೆ ಕೊಡಲು ಮನಸ್ಸಾಗಲಿಲ್ಲ. ಅಲ್ಲದೆ ಅವರ ಸತ್ಯಾಗ್ರಹ ತಮ್ಮ ದುಷ್ಟ ರೂಢಿಯ ವಿರುದ್ಧವೇ ಹೊರತು ತಮ್ಮ ವಿರುದ್ಧ ಅಲ್ಲವೆಂಬುದನ್ನು ತಿಳಿದುಕೊಂಡು, ತಮ್ಮ ತಪ್ಪನ್ನು ತಿದ್ದಿಕೊಂಡರು. ಈ ಸುದ್ದಿ ಗಾಂಧೀಜಿಯವರಿಗೂ ತಲುಪಿತು.ಅವರು ವಿದ್ಯಾರ್ಥಿಗಳಿಗೆ ಉತ್ತೇಜನ ಕೊಟ್ಟು ಪತ್ರ ಬರೆದರು.ಇದೇ ರೀತಿ ನಾವೂ ಕೂಡ ಶುದ್ಧವೂ ಸುಂದರವೂ ಪ್ರೇಮಮಯವೂ ಆದ ಈ ಅಹಿಂಸೆಯ ಅಸ್ತ್ರವನ್ನು ಬದುಕಿನಲ್ಲಿ ಬಳಸಿದರೆ, ಸಮಾಜದಲ್ಲಿಯ ಅನಿಷ್ಟ ರೂಢಿಗಳು ತೊಲಗಿ ಸಮಾಜ ಅಭಿವೃದ್ಧಿಪಥದಲ್ಲಿ ಮುನ್ನಡೆಯಬಲ್ಲದು.

## VSA of 1 m.

**ಪ್ರಶ್ನೆಗಳು :**

೧)ಸತ್ಯಾಗ್ರಹವನ್ನು ಎಲ್ಲೆಲ್ಲಿ ಬಳಸಬಹುದು? ೧

೨) ಧರ್ಮಜ ಹಳ್ಳಿಯವರು ಸತ್ಯಾಗ್ರಹ ಮಾಡಲು ನಿರ್ಧರಿಸಿದ್ದೇಕೆ? ೧

## SAQ of 2m.

೩) ಹಳ್ಳಿಯಲ್ಲಿರುವ ಅರ್ಥರಹಿತ ರೂಢಿಯನ್ನು ನಿಲ್ಲಿಸಲು ತರುಣರು ಏನು ಮಾಡಿದರು? ೨

೪) ಹಿರಿಯರು ತರುಣರಿಗೆ ಏಕೆ ಶಿಕ್ಷೆ ಕೊಡಲಿಲ್ಲ? ೨

### ಗದ್ಯ –೨

ಯುದ್ಧಗಳಲ್ಲಿ ಹೋರಾಡಿ ವೀರಮರಣ ಹೊಂದಿದವರ ಸ್ಮಾರಕವಾಗಿ ನಿಲ್ಲಿಸಿದ ವೀರಗಲ್ಲುಗಳು ಕರ್ನಾಟಕದ ಉದ್ದಗಲಕ್ಕೂ ಅಧಿಕ ಸಂಖ್ಯೆಯಲ್ಲಿ ಸಿಗುತ್ತವೆ. ಹಾಗೆಯೇ ಪ್ರಾಣಿಗಳ ರಕ್ಷಣೆಗಾಗಿ ಸೆಣಸುವಾಗ ಅಥವಾ ಮಹಿಳೆಯರ ಮಾನರಕ್ಷಣೆಗಾಗಿ ಹೋರಾಡಿ ಮಡಿದವರ ನೆನಪಿಗಾಗಿ ನಿಲ್ಲಿಸಿದ ವೀರಗಲ್ಲುಗಳೂ ಸಿಗುತ್ತವೆ. ತುರುಗೋಳ್, ಪೆಣ್ಬುಯಿಲ್,

ಎರೆವೆಸ, ನಂಟನೆಡರು, ಊರಳಿವು ಮುಂತಾದ ಅನೇಕ ಪ್ರಸಂಗಗಳಲ್ಲಿ ಹೋರಾಡಿ ವೀರಮರಣವನ್ನಪ್ಪಿದ ಸ್ಮಾರಕವಾಗಿ ನಿಲ್ಲಿಸಿದ ವೀರಗಲ್ಲುಗಳೂ ಇವೆ.

ಪ್ರಾಚೀನ ಕರ್ನಾಟಕದಲ್ಲಿ ಆಕಳು ಸಂಪತ್ತೆಂದೂ, ಪೂಜ್ಯವೆಂದೂ ಭಾವಿಸಿದ್ದರು.ಆದರೆ ಆ ಕಾಲದಲ್ಲಿ ದಾಳಿಕಾರರು ಊರುಗಳಲ್ಲಿ ನುಗ್ಗಿ ಆಕಳುಗಳನ್ನು ಕದ್ದು ಒಯ್ಯುತ್ತಿದ್ದ ಸಂದರ್ಭಗಳಿದ್ದವು. ಹೀಗೆ ಆಕಳುಗಳನ್ನು ಒಯ್ಯುವುದನ್ನು ತುರುಗೋಳ್ ಅಥವಾ ಗೋಗ್ರಹಣ ಎನ್ನುತ್ತಾರೆ.ಆಕಳಿಂದ ಸಿಗುವ ಸಂಪತ್ತಿನ ಆಸೆಯಿಂದ ಅಥವಾ ಊರಿನ ಜನರನ್ನು ಅವಮಾನ ಮಾಡುವ ಉದ್ದೇಶದಿಂದ ಅಥವಾ ಊರಿನ ಮೇಲೆ ದಾಳಿ ಮಾಡುವ ಉದ್ದೇಶದಿಂದತುರುಗೋಳ್ ಪ್ರಸಂಗಗಳು ಸಂಭವಿಸುತ್ತಿದ್ದವು.ಇಂಥ ಪ್ರಸಂಗಗಳಲ್ಲಿ ಹೋರಾಡಿ ಮಡಿದವರ ಸ್ಮಾರಕವಾಗಿ ಊರಿನ ಜನತೆ ಅಥವಾ ವೀರನ ಸಂಬಂಧಿಕರುವೀರಗಲ್ಲು ನೆಡುತ್ತಿದ್ದರು.ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಜಗದೇವರಸ ಎಂಬ ರಾಜನ ಆಜ್ಞೆಯ ಮೇರೆಗೆ ಮದಸಾಲೆಯ ಕಾಳರಸನು ಕೊರಕೊಡು ಗ್ರಾಮದ ಮೇಲೆ ದಾಳಿಮಾಡಿ, ಅಲ್ಲಿಯ ತುರುಗಳನ್ನು ಕದ್ದೊಯ್ಯುವಾಗ, ಆ ಊರಿನ ದೇವೇಗೌಡ ಮತ್ತು ಮಲ್ಲಗೌಡರೆಂಬ ಅಣ್ಣತಮ್ಮಂದಿರು ತುರುಗಳನ್ನು ರಕ್ಷಿಸಲು ಹೋರಾಡಿ ಮಡಿಯುತ್ತಾರೆ. ಅವರ ಇನ್ನೊಬ್ಬ ತಮ್ಮ ದಾಳಿಕೋರರನ್ನು ಸೋಲಿಸಿ ಯುದ್ಧದಲ್ಲಿ ಮಡಿದ ಅಣ್ಣಂದಿರ ಸ್ಮಾರಕವಾಗಿ ವೀರಗಲ್ಲು ನಿಲ್ಲಿಸಿದನು.ತಮ್ಮನ್ನು ಸಾಕಿದ ಒಡೆಯರ ಅನ್ನದ ಋಣವನ್ನು ತೀರಿಸಲು ಪ್ರಾಣದ ಹಂಗು ತೊರೆದು ಅರಸನ ಪರವಾಗಿ ಕಾದುವುದಕ್ಕೆ ಎರೆವೆಸ ಎಂದು ಹೆಸರು. ಹೀಗೆ ಈ ವೀರಗಲ್ಲುಗಳು ಪ್ರಾಚೀನ ಕನ್ನಡಿಗರ ವೀರಪರಂಪರೆಯ ಇತಿಹಾಸವನ್ನೂ, ಅವರ ತ್ಯಾಗ, ಸ್ವಾಮಿನಿಷ್ಠೆ, ಶ್ರದ್ಧೆ, ಛಲ, ಪರೋಪಕಾರ ಬುದ್ಧಿ, ಪ್ರಾಮಾಣಿಕತೆ ಹಾಗೂ ಯುದ್ಧಪ್ರಿಯತೆಗಳನ್ನು ತಿಳಿಸಿಕೊಡುತ್ತವೆ.

## VSA of 1 m.
### ಪ್ರಶ್ನೆಗಳು :

೧)ವೀರಗಲ್ಲುಗಳು ಎಂದರೇನು? ೧

೨) ವೀರಗಲ್ಲುಗಳಲ್ಲಿರುವ ಬಗೆಗಳು ಯಾವವು? ೧

## SAQ of 2m.

೩) ವೀರಗಲ್ಲುಗಳು ಏನನ್ನು ತಿಳಿಸಿಕೊಡುತ್ತವೆ? ೨

೪) ಕೊರಕೊಡು ಗ್ರಾಮದ ವೀರಗಲ್ಲಿನ ಹಿನ್ನೆಲೆಯನ್ನು ತಿಳಿಸಿರಿ. ೨

## ಗದ್ಯ –೩

ಮಾತನಾಡುವುದು ಒಂದು ಕಲೆ. ಎಲ್ಲ ಜನರು ಮಾತನಾಡುವುದನ್ನು ಬಲ್ಲರು.ಮಾತು ಮಾನವನು ನಿರಾಯಾಸವಾಗಿ ಕಲಿಯುವ ಸಂಗತಿಯಾಗಿದೆ.ಎಲ್ಲ ಜನರೂ ದಿನವಿಡೀ ಅನ್ಯರೊಂದಿಗೆ ಮಾತನಾಡುತ್ತಲೇ ಇರುತ್ತಾರೆ. ಹದವರಿತು ಮಾತನಾಡುವುದು, ಸಂದರ್ಭಕ್ಕೆ ತಕ್ಕಂತೆ ಮಾತನಾಡುವುದು, ಸುಸಂಸ್ಕೃತನಂತೆ ಮಾತನಾಡುವುದು ಮಾತುಗಾರಿಕೆಯ ಕಲೆಯನ್ನು ಎತ್ತಿ ತೋರಿಸುತ್ತದೆ. ಮಾತು ಜಗಳಕ್ಕೂ ಮೂಲವಾಗಬಹುದು. ನಾವು ಮಾತನಾಡುವಾಗ ಅಲ್ಪ-ಸ್ವಲ್ಪ ತಪ್ಪಿದರೂ, ಭಾವಾವೇಶಕ್ಕೆ ಒಳಗಾಗಿ ಮಾತನಾಡಿದರೂ, ಸಂಬಂಧಗಳು ಏರುಪೇರಾಗುತ್ತವೆ; ಇಲ್ಲವೆ ಕಳಚಿಹೋಗುತ್ತವೆ. ತಪ್ಪಾಗಿ ಆಡುವ ಒಂದು ಕ್ಷುಲ್ಲಕ ಮಾತು ಅನೇಕ ಅನರ್ಥಗಳಿಗೆ ಕಾರಣವಾಗುತ್ತದೆ, ದ್ವೇಷಭಾವನೆಗಳಿಗೆ ಎಡೆಮಾಡಿಕೊಡುತ್ತದೆ. ಸರಿಯಾಗಿ ಮಾತನಾಡಲು ಬರದ ವ್ಯಕ್ತಿಯನ್ನು ಗಮನದಲ್ಲಿ ಇಟ್ಟುಕೊಂಡೇ ‘ಮೌನ ಬಂಗಾರ’ ಎಂದು ಹೇಳಲಾಗಿದೆ.

‘ಮಾತು ಬಲ್ಲವನಿಗೆ ಜಗಳವಿಲ್ಲ’ ಎಂದು ಹೇಳುವುದು ಮಾತಿನ ಮಹತ್ವವನ್ನು ಅರುಹುತ್ತದೆ.ಸಂದರ್ಭೋಚಿತವಾಗಿ ಜಾಣ್ಮೆಯಿಂದ ತಪ್ಪುಗ್ರಹಿಕೆಗೆ ಅವಕಾಶ ಕೊಡದಂತೆ ಮಾತನಾಡುವ ವ್ಯಕ್ತಿ ರಾಯಭಾರದ ಕೆಲಸಕ್ಕೆ ಯೋಗ್ಯನೆನಿಸುತ್ತಾನೆ. ಆವೇಶಪರನಾಗಿ ಮಾತನಾಡುವ ವ್ಯಕ್ತಿ ಯಾವಾಗಲೂ ಜಗಳಕ್ಕೆ ಬರುತ್ತಾನೆ. ಎಲುಬಿಲ್ಲದ ನಾಲಿಗೆ ಹೇಗಾದರೂ ಹೊರಳುತ್ತದೆ.ಅದನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು ನಾವು ಮಾತನಾಡುವ ಕಲೆಯನ್ನು ರೂಢಿಸಿಕೊಳ್ಳಬೇಕು.ಇದು ಕೆಲವರಿಗೆ ಸಹಜವಾಗಿ ಕರಗತವಾಗಿರುತ್ತದೆ.ಇನ್ನು ಕೆಲವರು ಇದನ್ನು ಪ್ರಯತ್ನದಿಂದ ಸಾಧಿಸುತ್ತಾರೆ.ನಮ್ಮ ಮಾತನ್ನು ನಾವೇ ಅನ್ಯರಾಗಿ ನೋಡುವ, ವಿಶ್ಲೇಷಿಸುವ ಹಾಗೂ ವಿಮರ್ಶಿಸುವ ಪ್ರಯತ್ನ ಮಾಡಿದ್ದೇ ಆದರೆ ನಾವು ಉತ್ತಮ ವಾಗ್ಮಿಗಳಾಗಬಹುದು.

## VSA of 1 m.

**ಪ್ರಶ್ನೆಗಳು :**

೧) ಯಾವುದು ಮಾತುಗಾರಿಕೆಯ ಕಲೆಯನ್ನು ಎತ್ತಿ ತೋರಿಸುತ್ತದೆ? ೧

೨) ಅನರ್ಥಗಳಿಗೆ ಯಾವುದು ಕಾರಣವಾಗುತ್ತದೆ? ೧

## SAQ of 2m.

೩) ಸಂಬಂಧಗಳು ಯಾವಾಗ ಏರುಪೇರಾಗುತ್ತವೆ? ೨

೪) ಉತ್ತಮ ವಾಗ್ಮಿಗಳಾಗುವುದು ಹೇಗೆ? ೨

## ಪದ್ಯ – ೧

## ಮೂಢನಂಬಿಕೆ

ಮೂಢ ನಂಬಿಕೆ, ಅನಾದಿ
ಮೂಢ ನಂಬಿಕೆ.
ತೊಲಗಬಹುದು ಎಂದಿಗೆ
ಇದರ ಅಂಜಿಕೆ?

ಹೊರಟಿದ್ದಾನೆ ತರುಣನೊಬ್ಬ
ಇಂಟರ್‌ವ್ಯೂಗೆ ತಾನು,
'ಎಲ್ಲಿ ಹೊರಟೆ?' ಎನ್ನಬೇಕೆ
ಪಕ್ಕದ ಮನೆ ವೇಣು,
ಜೊತೆಗೆ ಒಂಟಿ ಸೀನು;
ಹೋದ ಕೆಲಸ ಆದಹಾಗೇ!
ಇನ್ನೆಲ್ಲಿದೆ ಲಕ್ಕು?
ದಾರಿಗಡ್ಡ ಹಾಯಿತಲ್ಲ ಹಾಳು ಕಪ್ಪು ಬೆಕ್ಕು!
ದರಿದ್ರ ಕಪ್ಪು ಬೆಕ್ಕು!

ಹೊರಡಬಹುದೇ ಪ್ರಯಾಣಕ್ಕೆ
ರಾಹುಕಾಲದಲ್ಲಿ?
'ಉಂಟೆ?ಉಂಟೆ?' ಲೊಚಗುಟ್ಟಿದೆ
ಗೋಡೆ ಮೇಲೆ ಹಲ್ಲಿ.
ಸೇರಬಹುದೆ ನೌಕರಿಗೆ?
ಇಂದು ಮಂಗಳವಾರ!
ಜೊತೆಗೆ ಅಮಾವಾಸ್ಯೆ ಕೂಡ!
ಕಾದಿದೆ ಗ್ರಹಚಾರ!

ಗ್ರಹಣವೆಂದರೇನು? ಬರೀ
ಬೆಳಕು ನೆರಳಿನಾಟ.
ಶಾಲೆ ಕಾಲೇಜಿನಲ್ಲಿ
ಓದುತ್ತೇವೆ ಪಾಠ.

ಆದರೇನು ಬಾಳಿನಲ್ಲಿ
ಎಲ್ಲಿದೆ ವಿಜ್ಞಾನ?
ಗ್ರಹಣ ಬಿಟ್ಟ ಕೂಡಲೇ
ಮಾಡುತ್ತೇವೆ ಸ್ನಾನ.

ಮೂಢ ನಂಬಿಕೆ, ಅನಾದಿ
ಮೂಢನಂಬಿಕೆ.
ತೊಲಗಲಿ ಇನ್ನಾದರೂ
ಇದರ ಅಂಜಿಕೆ.ಕವಿ : **ಬಿ. ಆರ್.ಲಕ್ಷ್ಮಣರಾವ**

## VSA of 1 m.

**ಪ್ರಶ್ನೆಗಳು :–**

೧) ತರುಣನಿಗೆ ಆದ ಅಪಶಕುನವೇನು? ೧
೨) ಎಲ್ಲರಿಗೂ ಯಾವುದರ ಅಂಜಿಕೆ? ೧

## SAQ of 2m.

೩) ಪ್ರಯಾಣಕ್ಕೆ ಮತ್ತು ನೌಕರಿಗೆ ಸೇರಲು ಉಂಟಾದ ತೊಂದರೆ ಏನು? ೨
೪) ನಮ್ಮ ಕಲಿಕೆಗೂ, ಬದುಕುವ ರೀತಿಗೂ ಇರುವ ಅಂತರವನ್ನು ಕವಿ ಹೇಗೆ ವಿಡಂಬಿಸಿದ್ದಾರೆ? ೨

## ಪದ್ಯ –೨

### ಶಿಕ್ಷಣ ಶಕ್ತಿ

ಅಕ್ಷರವೆಂಬುದು ಅಲ್ಲಾ ಉದ್ದೀನನ
ಅದ್ಭುತ ಮಾಯಾದೀಪ
ಅದು ವಶವಾದರೆ ನಿನಗೆ ನೀಡುವುದು
ಹೊಸ ಜೀವನ, ಹೊಸ ರೂಪ.

ದೀಪ ಉಜ್ಜಿದರೆ ಅವತರಿಸುವನು
ಸರ್ವಶಕ್ತ ದೂತ
ಅವನ ಬೆನ್ನೇರಿ ನೀ ಸಂಚರಿಸುವೆ
ಬ್ರಹ್ಮಾಂಡ ಸಮಸ್ತ.

ಅವನ ನೆರವಿನಿಂದ  ನೀಗಿ ಹೋಗುವುದು
ನಿನ್ನ ಕಷ್ಟ ಕಾರ್ಪಣ್ಯ,
ಕಳಚಿ ಬೀಳುವುದು ದಾಸ್ಯ ಸಂಕೋಲೆ
ನೀನು ಹೊಸ ಮನುಷ್ಯ.

ಹನುಮನಂತೆ ನೀ ವಿಕಾಸಗೊಳ್ಳುವೆ
ಅರಿತು ನಿನ್ನ ಶಕ್ತಿ
ನೀನೇ ಬೆನ್ನೆಲುಬು, ನೀ ಬಲವಾದರೆ
ಈ ದೇಶದ ಪ್ರಗತಿ.

## VSA of 1 m.

**ಪ್ರಶ್ನೆಗಳು :–**

೧) ಮಾಯಾದೀಪ ಯಾವುದು? ೧

೨) ಸರ್ವಶಕ್ತನ ಬೆನ್ನೇರಿ ಎಲ್ಲಿ ಸಂಚರಿಸಬಹುದು? ೧

## SAQ of 2m.

೩) ಅಕ್ಷರದ ನೆರವಿನಿಂದ ಹೇಗೆ ಹೊಸ ಮನುಷ್ಯರಾಗಬಹುದು? ೨

೪) ಯಾವಾಗ ದೇಶದ ಪ್ರಗತಿಯಾಗುತ್ತದೆ? ೨

## ಪದ್ಯ –೩

ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ–ಸ್ನೇಹಗಳ
ಗುರುತಿಸದಾದೆನು ನಮ್ಮೊಳಗೆ

ಎಲ್ಲಿದೆ ನಂದನ ಎಲ್ಲಿದೆ ಬಂಧನ
ಎಲ್ಲಾ ಇವೆ ಈ ನಮ್ಮೊಳಗೇ
ಒಳಗಿನ ತಿಳಿಯನು ಕಲಕದೆ ಇದ್ದರೆ
ಅಮೃತದ ಸವಿಯಿದೆ ನಾಲಿಗೆಗೆ

ಹತ್ತಿರವಿದ್ದೂ ದೂರ ನಿಲ್ಲುವೆವು
ನಮ್ಮ ಅಹಮ್ಮಿನ ಕೋಟೆಯಲಿ
ಎಷ್ಟು ಕಷ್ಟವೋ ಹೊಂದಿಕೆ ಎಂಬುದು
ನಾಲ್ಕು ದಿನದ ಈ ಬದುಕಿನಲಿ.**–ಕವಿ : ಜಿ. ಎಸ್. ಶಿವರುದ್ರಪ್ಪ**

## VSA of 1 m.

**ಪ್ರಶ್ನೆಗಳು :–**

೧) ಕವಿಗಳು ಏನನ್ನು ಗುರುತಿಸದಾದರು? ೧

೨) ಬದುಕಿನಲ್ಲಿ ಯಾವುದು ಕಷ್ಟ? ೧

## SAQ of 2m.

೩) ಕವಿಗಳು ಯಾರನ್ನು, ಎಲ್ಲಿ ಹುಡುಕಿದರು? ೨

೪) ಏನನ್ನು ಕಲಕಬಾರದು? ಕಲಕದಿದ್ದರೆ ನಾಲಿಗೆಗೆ ಎಂಥ ಸವಿಯಿದೆ? ೨

## LAQ of 4m.

### ಗದ್ಯಭಾಗ ಸಂಕ್ಷೇಪಿಸಿರಿ–೧

ಈ ಲೇಖನವನ್ನು ಓದಿ ಅದರ ಮುಖ್ಯಾಂಶಗಳನ್ನು ಸಂಕ್ಷೇಪಿಸಿ ಬರೆಯಿರಿ. ೪

೧೯೪೭ ಅಗಸ್ಟ್ ೧೫ರಂದು ಭಾರತದ ಬಾನಿನಲ್ಲಿ ತ್ರಿವರ್ಣ ಧ್ವಜ ಹಾರಿತು.ಸ್ವಾತಂತ್ರ್ಯ ಬಂತು.ಆದರೆ ಹೈದರಾಬಾದ್ ಪ್ರಾಂತ್ಯದಲ್ಲಿ ಆ ಧ್ವಜ ನಿಷೇಧಿತ ವಸ್ತುವಾಯಿತು.ಗಾಂಧಿ ಟೊಪ್ಪಿಗೆ ತಿರಸ್ಕೃತವಾಯಿತು.'ವಂದೇ ಮಾತರಂ' ಗೀತೆ ದೇಶದ್ರೋಹದ ಹಾಡಾಯಿತು. ಹೈದರಾಬಾದಿನ ನಿಜಾಮ ತನ್ನ ರಾಜ್ಯವನ್ನು ಪ್ರತ್ಯೇಕ ಸ್ವತಂತ್ರ ರಾಜ್ಯವೆಂದು ಘೋಷಿಸಿದ. ರಾಜ್ಯಶಾಹಿ ಆಡಳಿತ ನಡೆಸಿದನು.ಅದನ್ನು ಹೈದರಾಬಾದ್ ಪ್ರಾಂತ್ಯದ ಸ್ವಾತಂತ್ರ್ಯಪ್ರೇಮಿಗಳು ವಿರೋಧಿಸಿದರು.ಚಳವಳಿ ನಡೆಸಿದರು.ಅನೇಕರು ಅಗಸ್ಟ್ ೧೫ರಂದೇ ಈಗಿನ ಕುಷ್ಟಗಿ ತಾಲೂಕಿನ ಮಾಲಗಿತ್ತಿಯಲ್ಲಿ ಕೆಂಚಮ್ಮನ ಗುಡಿಯ ಮುಂದೆ ಹೈದರಾಬಾದ್ ನಿಜಾಮನನ್ನು ವಿರೋಧಿಸಿ ಧ್ವಜವೇರಿಸಲು ಸಿದ್ಧರಾದರು.ಆಗ ಬಡಿಗೇರ ಸೀತಮ್ಮ ಒಂದು ಕೈಯಲ್ಲಿ ಕುಡುಗೋಲು, ಮತ್ತೊಂದು ಕೈಯಲ್ಲಿ ಧ್ವಜ ಹಿಡಿದು ನರ್ತಿಸಿದಳು.ಬಾದಿಂನಾಳ ಕತ್ರಿಯಲ್ಲಿ ಸೀತಮ್ಮ ರಜಾಕಾರರೊಂದಿಗೆ ಜೀವದ ಹಂಗು ತೊರೆದು ಸಾರಾಯಿ ಅಂಗಡಿಗಳನ್ನು ಬಂದ್ ಮಾಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದಳು.ರಜಾಕಾರರ ವಿರುದ್ಧದ ಕಾರ್ಯಾಚರಣೆಯಲ್ಲಿ ಬಾಂಬ್ ಎಸೆದಳು. ಹೀಗೆ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರನಾರಿ ಎನಿಸಿಕೊಂಡಳು.

### ಗದ್ಯಭಾಗ ಸಂಕ್ಷೇಪಿಸಿರಿ–೨

ಭಾರತದಲ್ಲಿ ಮಾತ್ರವಲ್ಲ, ಪ್ರಪಂಚದ ಎಲ್ಲ ದೇಶಗಳಲ್ಲಿಯೂ ನಗರಗಳ ಬೆಳವಣಿಗೆ ಮಿತಿಮೀರುತ್ತಿದೆ.ನಗರಗಳಿಗೆ ಗ್ರಾಮಗಳಿಂದ ವಲಸೆ ಬರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.ನಗರಗಳಲ್ಲಿ ಸಂಪತ್ತು ಕೇಂದ್ರೀಕರಣಗೊಳ್ಳುತ್ತಿರುವುದರಿಂದಲೂ, ಗ್ರಾಮಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇರುವುದರಿಂದಲೂಜನರು ನಗರಗಳಿಗೆ ಬರುತ್ತಿದ್ದಾರೆ. ಇದರಿಂದಾಗಿ ನಗರಗಳಲ್ಲಿ ನೀರಿನ ಸಮಸ್ಯೆ, ವಾಯು ಮತ್ತು ಶಬ್ದ ಮಾಲಿನ್ಯ ಮುಂತಾದ ಸಮಸ್ಯೆಗಳು ಅಧಿಕಗೊಳ್ಳುತ್ತಿವೆ. ಇಂತಹ ಸಂದರ್ಭದಲ್ಲಿ ಅನೇಕ ಜನರು ಗ್ರಾಮಗಳಿಗೆ ಹಿಂತಿರುಗುವ ಬಯಕೆಯನ್ನು ಹೊಂದಿದ್ದರೂ ಗ್ರಾಮಗಳಲ್ಲಿರುವ ಅನನುಕೂಲತೆಗಳಿಂದ ಹಾಗೆ ಮಾಡಲು ಆಗುತ್ತಿಲ್ಲ.

ನಗರಗಳ ಮಿತಿಮೀರಿದ ಬೆಳವಣಿಗೆಯಿಂದ ನಗರದ ರಸ್ತೆಗಳು ಇಂದು ಸಂಪೂರ್ಣವಾಗಿ ಹಾಳಾಗುತ್ತಿವೆ. ಅದರಲ್ಲಿಯೂ ಬೆಂಗಳೂರು, ಮುಂಬಯಿ, ಕೋಲ್ಕತ್ತ ಮೊದಲಾದ ನಗರಗಳಲ್ಲಿ ಬದುಕು ತುಂಬ ಯಾಂತ್ರಿಕವಾಗಿದೆ.ಆದ್ದರಿಂದ ನಗರಗಳ ಬೆಳವಣಿಗೆಯನ್ನು ನಿಲ್ಲಿಸಲು ಸರ್ಕಾರ ಮೊದಲು ತೀರ್ಮಾನವನ್ನು ತೆಗೆದುಕೊಳ್ಳಬೇಕು.ದೊಡ್ಡ ದೊಡ್ಡ ನಗರಗಳಲ್ಲಿ ಹೊಸಹೊಸ ಬೃಹತ್ ಕಾರ್ಖಾನೆಗಳನ್ನು ಸ್ಥಾಪಿಸಲು ಅನುಮತಿ ನೀಡಬಾರದು. ಹಳ್ಳಿಗಳಲ್ಲಿ ವೈದ್ಯಕೀಯ ಸೌಲಭ್ಯ, ಶಿಕ್ಷಣ ಸೌಲಭ್ಯ, ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಮಾಡಬೇಕು. ಇದರಿಂದ ನಗರಕ್ಕೆ ಸಂಪಾದನೆಗೆಂದು ಬಂದವರು ಜೀವನದ ಇಳಿಗಾಲವನ್ನು ಗ್ರಾಮಗಳಲ್ಲಿ ಕಳೆಯಲು ಮನಸ್ಸು ಮಾಡುತ್ತಾರೆ.ಆದರೆ ಇಂದು ನಮ್ಮ ರಾಜ್ಯ ಮತ್ತು ಕೇಂದ್ರ ಸರಕಾರಗಳು ಆಡಳಿತದ ಮೇಲೆ ನಿಯಂತ್ರಣ ಕಳೆದುಕೊಂಡಿರುವುದರಿಂದ ಇಂತಹ ಯೋಜನೆಗಳು ಮರೀಚಿಕೆಯಾಗಿವೆ.

### ಗದ್ಯಭಾಗ ಸಂಕ್ಷೇಪಿಸಿರಿ–೩

ಪ್ರಕೃತಿಯ ಪೂರ್ಣ ಸುಂದರ ರೂಪವೇ ಅರಣ್ಯ.ಈ ಅರಣ್ಯದ ಮನೋಹರತೆಗೆ ವನ್ಯಜೀವಿಗಳೇ ಕಾರಣ.ಮನುಷ್ಯನನ್ನು ಹೊರತುಪಡಿಸಿ ಎಲ್ಲ ವರ್ಗದ ಪ್ರಾಣಿ ಸಂಪತ್ತು ಹಾಗು ಸಸ್ಯ ಸೃಷ್ಟಿಯು ವನ್ಯಜೀವಿಗಳೆನಿಸಿಕೊಂಡಿವೆ. ಈ ಸೃಷ್ಟಿಯ ಸಂರಕ್ಷಣೆಗೆ ಕಾಡು ಅವಶ್ಯ.ಕಾಡಿನ ರಕ್ಷಣೆಗೆ ಈ ವನ್ಯಜೀವಿಗಳು ಅಗತ್ಯ.ಒಂದನ್ನೊಂದು ಬಿಟ್ಟು ಇವು ಇರಲಾರವು. ಈ ವನ್ಯಜಿವಿಗಳ ಸಂತತಿ ಅಭಿವೃದ್ಧಿಯಾಗಬೇಕಾದರೆ ವಿಶಾಲವಾದ ಅರಣ್ಯ ಪ್ರದೇಶ ಇರಬೇಕು. ನೀರು, ಆಹಾರ ಹಾಗೂ ವಾಸಸ್ಥಳಗಳು ಅನಾಯಾಸವಾಗಿ ಅವುಗಳಿಗೆ ಸಿಗುವಂತೆ ನಿಸರ್ಗದತ್ತ ಸೌಲಭ್ಯಗಳಿಂದ ಕೂಡಿರಬೇಕು.ಬೇಟೆಗಾರರ ಕಾಟ, ಬೆಂಕಿಯ ಕಾಟ ಇಲ್ಲವಾಗಿರಬೇಕು.

ಇಂದು ನಾಗರಿಕತೆಯ ನೆಪದಲ್ಲಿ ಉರುವಲಿಗಾಗಿ, ಪೀಠೋಪಕರಣಗಳಿಗಾಗಿ ಹಾಗೂ ಬೇಸಾಯ ಮತ್ತು ಕೈಗಾರಿಕೆಗಳಿಗಾಗಿ ಅರಣ್ಯಗಳು ನಾಶವಾಗುತ್ತಿವೆ. ಹುಲಿ, ಚಿರತೆ ಹಾಗು ಸಿಂಹದ ಚರ್ಮವನ್ನು ಫ್ಯಾಶನ್ನಿಗೆ ಬಳಸುತ್ತಿದ್ದಾರೆ.ಈ ತೊಗಲಿಗಾಗಿ ಹಾಗೂ ರುಚಿಯಾದ ಅಲಭ್ಯ ಮಾಂಸಕ್ಕಾಗಿ ಬೇಟೆಗಾರರು ಬಂದೂಕುಗಳಿಂದ ಅಕ್ರಮ ಬೇಟೆಯಾಡುತ್ತಿದ್ದಾರೆ. ಹಾವಿನ ಚರ್ಮವನ್ನು ಸುಂದರ ಪರ್ಸು ಹಾಗು ಚಪ್ಪಲಿಗಳ ಸೌಂದರ್ಯ ವರ್ಧನೆಗೆ ಬಳಸುತ್ತಿದ್ದಾರೆ. ಪರದೇಶಗಳ ಬೇಡಿಕೆ ಈ ಸರಕುಗಳಿಗೆ

ಅಪಾರವಾಗಿದೆ.ಇನ್ನು ಕೆಲವು ಶ್ರೀಮಂತರು ಅಪರೂಪದ ಪಕ್ಷಿಗಳನ್ನು ಕೊಂದು ಅದಕ್ಕೆ ಅರಳೆ ತುಂಬಿ ತಮ್ಮ ಮನೆಯ ವರಾಂಡದಲ್ಲಿ ದೊಡ್ಡಸ್ತಿಕೆಯ ಪ್ರದರ್ಶನಕ್ಕಾಗಿ ಬಳಸುತ್ತಿದ್ದಾರೆ.ಈಗಾಗಲೇ ಈ ಹವ್ಯಾಸದಿಂದ ಭಾರತದಲ್ಲಿ ೩೦ ಜಾತಿಯ ಪ್ರಾಣಿಗಳು ಹೇಳಹೆಸರಿಲ್ಲದಂತೆ ನಾಶವಾಗಿವೆ. ಸಿಂಹಕ್ಕೂ ಇದೇ ಸ್ಥಿತಿ ಬರುತ್ತಿದೆ.ಕಳ್ಳ ಶಿಕಾರಿಗಳಿಂದ ಹಾಗೂ ತಮ್ಮ ಕೃಷಿಗೆ ಹಾನಿಯೆಂದು ವಿಷಪೂರಿತ ಅಹಾರಗಳನ್ನಿತ್ತು ವನ್ಯಪ್ರಾಣಿಗಳ ಸಮೂಹವನ್ನೇ ಕೊಲೆ ಮಾಡುವ ಕೆಲವು ರೈತರಿಂದ ವನ್ಯಪ್ರಾಣಿಗಳ ಸಂಖ್ಯೆ ವಿರಳವಾಗುತ್ತಿದೆ.ಈ ವಿನಾಶದಿಂದ ಮಾನವನಿಗೆ ಉಪಕಾರಿಗಳಾದ ಅನೇಕ ಪ್ರಾಣಿ-ಪಕ್ಷಿಗಳು ಸೃಷ್ಟಿಯಿಂದಲೇ ನಿರ್ನಾಮವಾಗುತ್ತಿವೆ.

## LAQ of 4m.

### ಪತ್ರಗಳು (ವೈಯಕ್ತಿಕ)

೧) ವಾರ್ಷಿಕ ಪರೀಕ್ಷೆಯ ತಯಾರಿಯನ್ನು ತಿಳಿಸುತ್ತ ನಿಮ್ಮ ಪೋಷಕರಿಗೆ ಒಂದು ಪತ್ರ ಬರೆಯಿರಿ.
೨) ಭ್ರಷ್ಟಾಚಾರದ ನಿರ್ಮೂಲನೆಯ ಅವಶ್ಯಕತೆಯನ್ನು ವಿವರಿಸುತ್ತ ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರ ಬರೆಯಿರಿ.
೩) ನೀವು ಮಾಡಿದ ಪ್ರವಾಸದ ಅನುಭವಗಳನ್ನು ವಿವರಿಸುತ್ತ ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರ ಬರೆಯಿರಿ.

## LAQ of 6m.

### ಪ್ರಬಂಧಗಳು

೧. ನನ್ನ ನೆರೆಹೊರೆಯವರು ಮತ್ತು ನಾನು.
೨. ಶಾಲೆಯ ವಾರ್ಷಿಕ ಕ್ರೀಡಾ ಪಂದ್ಯಗಳು.
೩. ದೂರದರ್ಶನದ ಲಾಭ ಹಾನಿಗಳು.
೪. ನನ್ನ ಜೀವನದ ಗುರಿ.
೫. ಜೀವನದಲ್ಲಿ ಆತದ ಮಹತ್ವ.
೬. ರಾಷ್ಟ್ರೀಯ ಹಬ್ಬಗಳು.
೭. ಪರಿಸರ ಮಾಲಿನ್ಯ ಮತ್ತು ರಕ್ಷಣೆ.
೮. ಗ್ರಂಥಾಲಯಗಳು.
೯. ಮೂಢನಂಬಿಕೆಗಳು ಮತ್ತು ಅದರಿಂದ ಆಗುವ ಹಾನಿಗಳು.

### ಅನ್ವಯಿಕ ವ್ಯಾಕರಣ– ೧

## VSA of ½ m.(Grammer)

೧) ಇವುಗಳಿಗೆ ತತ್ಸಮ ತದ್ಭವ ಬರೆಯಿರಿ. ೨
ಬಿತ್ತರಿಸು, ಆಶ್ಚರ್ಯ, ಪತಿವ್ರತೆ, ಕುವರ.
೨) ಇವುಗಳಿಗೆ ವಿರುದ್ಧ ಪದ ಬರೆಯಿರಿ. ೨
ಶಕ್ಯ, ಅಧಿಕೃತ, ಸಮರ್ಥ, ನಂಬಿಕೆ.
೩) ಇವುಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ. ೧
ವಿಘ್ನ, ಮಾತಂಗ.

## SAQ of 1m.

೪) ಇವುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ. ೨
ಕರತಲಾಮಲಕ, ಸಿಡಿದೇಳು.
೫) ಈ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿರಿ. ೨
ನನ್ನಿಗೊಟ್ಟು, ಅಂಗಾಧಿಪತಿ.

೬) ಇವುಗಳ ಸಮಾಸ ವಿಗ್ರಹಿಸಿ ಹೆಸರಿಸಿರಿ. ೨

ದಟ್ಟಡವಿ, ನಡುವಿರುಳ್.

೭) ಇವುಗಳ ವಿಭಕ್ತಿ ಪ್ರತ್ಯಯ ಬಿಡಿಸಿ ಹೆಸರಿಸಿರಿ. ೨

ವರ್ಷಾಕಾಲದೊಳ್, ಗುರುವಿನ.

೮) ಈ ಗಾದೆಗಳಿಗೆ ಅರ್ಥ ಬರೆದು ವಿಸ್ತರಿಸಿ. (ಬೇಕಾದ ಎರಡಕ್ಕೆ) ೪

"ಹಾಸಿಗೆ ಇದ್ದಷ್ಟು ಕಾಲು ಚಾಚು".

"ಒಗ್ಗಟ್ಟಿನಲ್ಲಿ ಬಲವಿದೆ".

"ಸೋಲೇ ಗೆಲುವಿನ ಸೋಪಾನ".

೯) ಈ ವಾಕ್ಯದಲ್ಲಿನ ನಾಮಪದ, ಕ್ರಿಯಾಪದಗಳನ್ನು ಗುರುತಿಸಿ ಬರೆಯಿರಿ. ೧

ಆದುದರಿಂ ಸಕ್ಕದದ ನಲ್ನುಡಿ ಮೆರೆಯೆ, ತಿರುಳ್ಗನ್ನಡದೊಳ್ ಕಥೆಯನುಸಿರ್ವೆಂ.

**ಅನ್ವಯಿಕ ವ್ಯಾಕರಣ – ೨**

## VSA of ½ m.(Grammer)

೧) ಇವುಗಳಿಗೆ ತತ್ಸಮ ತದ್ಭವ ಬರೆಯಿರಿ. ೧

ಕಬ್ಬ, ಸ್ಮಶಾನ.

೨) ಇವುಗಳಿಗೆ ವಿರುದ್ಧ ಪದ ಬರೆಯಿರಿ. ೨

ವಿಶ್ರಾಂತಿ, ಮಂಗಳ, ಅತಿವೃಷ್ಟಿ, ನೆರಳು.

೩) ಇವುಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ. ೨

ರಕ್ಕಸ, ಮಿಥ್ಯೆ, ಬಾಗಿಲು, ಕಿನಿಸು.

೪) ಕೆಳಗಿನವುಗಳಲ್ಲಿ ಜೋಡುನುಡಿ, ಅನುಕರಣಾವ್ಯಯಗಳನ್ನು ವಿಂಗಡಿಸಿ ಬರೆಯಿರಿ. ೧

ಸರಸರ, ನೂಕುನುಗ್ಗಲು.

## SAQ of 1m.

೫) ಇವುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ. ೨

ಚಿಂತಾಜನಕ, ಮುಖ ತಿರುವು.

೬) ಈ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿರಿ. ೨

ಜೀವನೋತ್ಸಾಹ, ವೈರಾಗ್ಯವಿದು.

೭) ಈ ಪದಗಳನ್ನು ವಿಗ್ರಹಿಸಿ, ಸಮಾಸವನ್ನು ಹೆಸರಿಸಿರಿ. ೨

ನೀರಂ ಪೊಕ್ಕು, ಪದುಮನಾಭ.

೮) ಇವುಗಳ ವಿಭಕ್ತಿ ಪ್ರತ್ಯಯ ಬಿಡಿಸಿ ಹೆಸರಿಸಿರಿ. ೨

ವರ್ಷಾಕಾಲದೊಳ್, ಶಾಲೆಯ.

೯) ಈ ಗಾದೆಗಳಿಗೆ ಅರ್ಥ ಬರೆದು ವಿಸ್ತರಿಸಿ. (ಬೇಕಾದ ಎರಡಕ್ಕೆ) ೪

"ಬೆಳ್ಳಗಿರುವುದೆಲ್ಲ ಹಾಲಲ್ಲ".

"ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು".

"ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ?"

## ಅನ್ವಯಿಕ ವ್ಯಾಕರಣ– ೩

## VSA of ½ m.(Grammer)

೧) ಇವುಗಳಿಗೆ ತತ್ಸಮ ತದ್ಭವ ಬರೆಯಿರಿ. ೨

ಕತ್ತುರಿ, ಸಂಧ್ಯಾ, ಯೋಧ, ಕಡುಗ.

೨) ಇವುಗಳಿಗೆ ವಿರುದ್ಧ ಪದ ಬರೆಯಿರಿ. ೧

ಅವ್ಯವಸ್ಥೆ, ಸ್ಥಿರ.

೩) ಇವುಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ. ೨

ಬಳಲಿಕೆ, ಹಿಗ್ಗು, ವನ, ಸೂಳ್.

೪) ಇವುಗಳ ಅರ್ಥವ್ಯತ್ಯಾಸ ಬರೆಯಿರಿ : ನೆಗಳ್ – ಪೊಗಳ್. ೧

## SAQ of 1m.

೫) ಇವುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ. ೨

ಪ್ರಾಣವೊಂದು ದೇಹವೆರಡು, ಕೈಬೀಸಿ ಕರೆ.

೬) ಈ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿರಿ. ೨

ಸೂಜಿಗಲ್ಲು, ನಿಜೇಶ.

೭) ಇವುಗಳ ಸಮಾಸ ವಿಗ್ರಹಿಸಿ ಹೆಸರಿಸಿರಿ. ೨

ಕಿರಿದಂತರ, ಮದಮತ್ಸರ.

೮) ಇವುಗಳ ವಿಭಕ್ತಿ ಪ್ರತ್ಯಯ ಬಿಡಿಸಿ ಹೆಸರಿಸಿರಿ. ೨

ತನಿವಣ್ಣಂ, ಮಾತಂಗಗಳಿಂ.

೯) ಈ ಗಾದೆಗಳಿಗೆ ಅರ್ಥ ಬರೆದು ವಿಸ್ತರಿಸಿ. (ಬೇಕಾದ ಎರಡಕ್ಕೆ)

“ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ”.

“ಮನಸ್ಸಿದ್ದರೆ ಮಾರ್ಗ”.

“ಆಚಾರವೇ ಸ್ವರ್ಗ; ಅನಾಚಾರವೇ ನರಕ”.

## MCQ OF 1 M.(Prose)

**೧. ಬಹು ಆಯ್ಕೆಯ ಪ್ರಶ್ನೆಗಳು :**

೧. ಪರಶಿವನ ತಪಸ್ಸಿಗೆ ವಿಘ್ನ ತಂದೊಡ್ಡಿದವನು ----

( ತಾಟಕಿ, ಮನ್ಮಥ, ಮಾರೀಚ, ಸುಬಾಹು )

೨. ಶ್ರೀರಾಮನ ತಾಯಿ ----

( ಸೀತೆ, ಸುಮಿತ್ರೆ, ಕೌಸಲ್ಯ, ಕೈಕೇಯಿ )

೩. ದಶರಥನ ಕುಲಪುರೋಹಿತರು ----

( ವಿಶ್ವಾಮಿತ್ರ, ವಸಿಷ್ಠ, ಭಗೀರಥ, ಕಶ್ಯಪ )

೪. ಪ್ಯಾರಿಸ್ ನಗರದ ನಡುವೆ ಹಾದುಹೋಗುವ ನದಿ ----

( ನೈಲ್, ಸರಯೂ, ಗಂಗಾ, ಸೀನ್ )

೫. ಕಟ್ಟಡದ ಹೊರಗೆ ಅಶ್ವಾರೋಹಿ ೧೪ನೆಯ ಲೂಯಿಯ ---- ದ ಪ್ರತಿಮೆ ಎದುರಾಯಿತು.

( ಚಿನ್ನ, ಬೆಳ್ಳಿ, ಹಿತ್ತಾಳೆ, ಕಂಚು )

೬. ಪ್ಯಾರಿಸ್ ವ್ಯಾಪಾರದಲ್ಲಿ ---- ನಗರದೊಡನೆ ಸ್ಪರ್ಧಿಸುತ್ತಿದೆ.

( ನ್ಯೂಯಾರ್ಕ್, ಜಪಾನ್, ಇಂಗ್ಲೆಂಡ್, ಚೀನಾ )

೭. ಭಾಂವ್ರಿಯ ಗಂಡನ ಹೆಸರು ----

( ರಾಮಚಂದ್ರ, ಮೋಹನಲಾಲ್, ಮದನ್‌ಲಾಲ್, ಕೌಶಿಕ್‌ಲಾಲ್ )

೮. ಮದುವೆಯಾದಾಗ ಭಾಂವ್ರಿಯ ವಯಸ್ಸು ----

( ಒಂದು ವರ್ಷ, ಎಂಟು ವರ್ಷ, ನಾಲ್ಕು ವರ್ಷ, ಹತ್ತು ವರ್ಷ )

೯. ಭಾಂವ್ರಿ ದೇವಿಗೆ ಹಳ್ಳಿ ಶಾಲೆಗಳಲ್ಲಿ ಕಂಡು ಬಂದ ಕೊರತೆ ----

( ಕುಡಿಯುವ ನೀರು, ಕಟ್ಟಡಗಳು, ಶೌಚಾಲಯಗಳು, ಸೂಕ್ತ ಅಧ್ಯಾಪಕರು )

೧೦.ಭೂಮಿ ತನ್ನ ಅಕ್ಷದ ಮೇಲೆ ಸೂರ್ಯ ಸುತ್ತುವುದನ್ನು ಭೂಮಿಯ ---- ಎನ್ನುವರು.

( ಭೂಕಂಪ, ಗುರುತ್ವಾಕರ್ಷಣೆ, ಪರಿಭ್ರಮಣ, ಗ್ರಹಣ )

೧೨.ಮುದ್ದಣನ ಪತ್ನಿಯ ಹೆಸರು ----

(ಮನೋರಮೆ, ಸುಧಾರಮೆ, ಶಾಕುಂತಲೆ, ಸ್ವಯಂಪ್ರಭೆ)

೧೨.-----ರಾಮಾಯಣ ಕತೆಯನ್ನು ಮನೋರಮೆ ಬಯಸುತ್ತಾಳೆ.

(ವಿಷ್ಣು, ಗರುಡ, ಶೇಷ, ನಾಗ.)

೧೩. ಮುದ್ದಣನು ಬರೆದ ಯಕ್ಷಗಾನ ಕೃತಿ-----

( ರತ್ನಾವತಿ ಕಲ್ಯಾಣ, ಅದ್ಭುತ ರಾಮಾಯಣ, ರಾಮಾಶ್ವಮೇಧ, ರಾಮ ಪಟ್ಟಾಭಿಷೇಕ)

೧೪. ಗಂಗೆಯಲ್ಲಿ ಸ್ನಾನ ಮಾಡುವಾಗ----- ಸುದಾಮೆಯನ್ನು ಹಿಡಿಯಿತು.)

( ಮೀನು, ಹಾವು, ಕಪ್ಪೆ, ಮೊಸಳೆ.)

೧೫. ಸುದಾಮೆಯ ಸಹಾಯಕ್ಕಾಗಿ ಬಂದವರು ----

( ಸುದತ್ತ, ಧನದತ್ತ, ಬ್ರಹ್ಮರಾಕ್ಷಸ, ತಳಾರ )

೧೬.ಧನದತ್ತನು ಸುದಾಮೆಯ ರೂಪವನ್ನು ಇವಳಿಗೆ ಹೋಲಿಸಿ ಹೊಗಳಿದನು.

( ಬ್ರಹ್ಮರಾಕ್ಷಸನಿಗೆ, ಸರಸ್ವತಿಗೆ, ವಿದ್ಯಾಧರಿಗೆ, ತಳವಾರನಿಗೆ )

## SAQ of 2m.

**ಈ ಪ್ರಶ್ನೆಗಳಿಗೆ ೨-೩ ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಮಂತ್ರಾಧಿ ದೇವತೆಗಳು ರಾಮನಿಗೆ ಏನೆಂದು ಹೇಳಿದವು?

೨. ವಿಶ್ವಾಮಿತ್ರನು ಅರಮನೆಗೆ ಬರಲು ಕಾರಣವೇನು?

೩. ರಾಮಲಕ್ಷ್ಮಣರ ನಡವಳಿಕೆ ಹೇಗಿತ್ತು?

೪. ಪ್ಯಾರಿಸ್ ವಿಮಾನ ನಿಲ್ದಾಣವನ್ನು ಯಾರ ನೆನಪಿಗಾಗಿ ಕಟ್ಟಲಾಗಿದೆ?

೫. ಪ್ಯಾರಿಸ್‌ನಲ್ಲಿ ಪ್ರಸ್ತುತ ೨೦ ಅಂತಸ್ತಿನ ಕಟ್ಟಡವನ್ನು ಯಾವ ಉದ್ದೇಶಕ್ಕಾಗಿ ಕಟ್ಟಲಾಗುತ್ತಿದೆ?

೬. ಪ್ಯಾರಿಸ್ ನಗರದ ಕೊರತೆಗಳು ಯಾವುವು?

೭. ರಾಜಸ್ಥಾನದಲ್ಲಿ ಸಾಥಿನ್ ಎಂದು ಯಾರನ್ನು ಕರೆಯುತ್ತಾರೆ?

೮. ಭಾಂವ್ರಿದೇವಿ ತನ್ನ ಹಳ್ಳಿಯಲ್ಲಿ ಒಂದು ಟ್ರಸ್ಟ್ ಮಾಡಲು ಏಕೆ ನಿರ್ಧರಿಸಿದಳು?

೯. ತವರು ಮನೆಯಲ್ಲಿ ಭಾಂವ್ರಿದೇವಿಯ ಬಾಲ್ಯವನ್ನು ವಿವರಿಸಿ.

೧೦.ಬದುಕಿನ ಬಗ್ಗೆ ಇರುವ ಮನುಷ್ಯ ಸ್ವಭಾವಗಳು ಯಾವವು?

೧೧.ಜಪಾನಿನಲ್ಲಿ ಭೂಕಂಪ ಸಹಿಸುವ ಶಕ್ತಿಯುಳ್ಳ ಕಟ್ಟಡವನ್ನು ಹೇಗೆ ಕಟ್ಟಿದ್ದಾರೆ?

೧೨.ಹಿಮಾಲಯ ಬೆಳೆಯುತ್ತಿರುವುದಕ್ಕೆ ಪ್ರಮುಖ ಕಾರಣವೇನು?

೧೩.ಮನೋರಮೆ ಮುದ್ದಣನಿಗೆ ಮಾಡಿದ ಉಪಚಾರವನ್ನು ವರ್ಣಿಸಿ.

೧೪.ಕನ್ನಡದಲ್ಲೇ ಹೇಳಬೇಕೆಂದು ಮನೋರಮೆ ಏಕೆ ಇಚ್ಛಿಸುತ್ತಾಳೆ ?

೧೫.ಕತೆ ಹೇಳಿದ್ದಕ್ಕೆ ಪ್ರತಿಯಾಗಿ ಮುದ್ದಣನು ಏನನ್ನು ಕೇಳಿದನು?

೧೬.ತಿನ್ನಲು ಬಂದ ಬ್ರಹ್ಮರಾಕ್ಷಸನಿಗೆ ಸುದಾಮೆ ಏನೆಂದು ಹೇಳಿದಳು?

೧೭.ತಳಾರನು ಸುದಾಮೆಯನ್ನು ಕುರಿತು ಆಡಿದ ಮೆಚ್ಚುಗೆಯ ಮಾತುಗಳು ಯಾವವು?

೧೮.ಸುದಾಮೆಯ ರೂಪವನ್ನು ಧನದತ್ತನು ಯಾರಿಗೆ ಹೋಲಿಸಿದ್ದಾನೆ?

## SAQ of 3m.

**ಈ ಪ್ರಶ್ನೆಗಳಿಗೆ ೫- ವಾಕ್ಯಗಳಲ್ಲಿ ಉತ್ತರಿಸಿರಿ.**

೧. ವಿಶ್ವಾಮಿತ್ರನು ಅರಮನೆಗೆ ಬರಲು ಕಾರಣವೇನು?
೨. ದಶರಥನ ಮಕ್ಕಳು ಹೇಗೆ ಬೆಳೆಯುತ್ತಿದ್ದರು?
೩. ರಾಮಲಕ್ಷ್ಮಣರು ತಾಟಕಿಯನ್ನು ಹೇಗೆ ಕೊಂದರು?
೪. ಪ್ಯಾರಿಸ್ ನಗರವಾಸಿಗಳ ಗೊಣಗಾಟವೇನು?
೫. ನೆಪೋಲಿಯನ್ನನ ಬಗ್ಗೆ ಲೇಖಕರಲ್ಲಿ ಮಾರ್ಗದರ್ಶಿ ಹೇಗೆ ಕುತೂಹಲ ಕೆರಳಿಸಿದಳು?
೬. ಅಮೇರಿಕಾದ 'ಅಂತರರಾಷ್ಟ್ರೀಯ ಅಧ್ಯಯನ ಕೇಂದ್ರ'ವೆಂಬ ವಸತಿಗೃಹ ಹೇಗಿತ್ತು?
೭. ಭಾಂವ್ರಿದೇವಿ ತನ್ನ 'ಸಾಥಿನ್' ತರಬೇತಿಯಲ್ಲಿ ತಿಳಿದುಕೊಂಡ ವಿಷಯಗಳು ಯಾವವು?
೮. ಭಾಂವ್ರಿದೇವಿಯ ವಿರುದ್ಧ ಪಂಚನು ಸೇಡು ಕಾರಲು ಕಾರಣವೇನು?
೯. ಭಾಂವ್ರಿದೇವಿಯ ಕೈತುಂಬಾ ಬೊಬ್ಬೆಗಳು ಏಕೆ ಮೂಡಿದವು?
೧೦. ಭೂಕಂಪದ ನಂತರವೂ ಕಿಲ್ಲಾರಿಯ ಜನ ಬದುಕಿಗೆ ಹೇಗೆ ಅಂಟಿಕೊಂಡಿದ್ದರು?
೧೧. ಭೂಕಂಪದ ಬಗ್ಗೆ ಇದ್ದ ಪೌರಾಣಿಕ ನಂಬಿಕೆಯನ್ನು ವಿಜ್ಞಾನ ಹೇಗೆ ತಲೆಕೆಳಗು ಮಾಡಿದೆ?
೧೨. ಭೂಕಂಪ ಉಗಮ ಕೇಂದ್ರದ ವಿಧಗಳು ಯಾವವು?
೧೩. ಕನ್ನಡ ಸಂಸ್ಕೃತಗಳನ್ನು ಹೇಗೆ ಹೊಂದಿಸಿಕೊಳ್ಳುವುದಾಗಿ ಮುದ್ದಣ ಹೇಳುತ್ತಾನೆ?
೧೪. ಉಡುಗೊರೆಗೆ ಸಂಬಂಧಿಸಿದಂತೆ ಮುದ್ದಣ ಮನೋರಮೆಯರ ನಡುವೆ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.
೧೫. ಸುದಾಮೆಯನ್ನು ಮೊಸಳೆಯಿಂದ ಬಿಡಿಸಲು ಧನದತ್ತನು ಬೇಡಿದುದೇನು?
೧೬. ಸುದಾಮೆಯನ್ನು ಕಂಡಾಗ ತಳಾರನಾಡಿದ ಮಾತುಗಳನ್ನು, ಆಕೆ ಅವನನ್ನು ನಂಬಿಸಿದ ಬಗೆಯನ್ನು ವಿವರಿಸಿ.
೧೭. ಪ್ರತಿಜ್ಞೆಯನ್ನು ಪೂರೈಸಲು ಸುದಾಮೆ ಏನು ಮಾಡಿದಳು? ಅವಳಿಗೆ ಅಡ್ಡಿ ಬಂದವರು ಯಾರು ಯಾರು?

## SAQ of 3m.

**೨. ಈ ಪ್ರಶ್ನೆಗಳಿಗೆ ೫-೫ ವಾಕ್ಯಗಳಲ್ಲಿ ಸಂದರ್ಭಸಹಿತ ವಿವರಿಸಿ.**

೧. "ನಿನ್ನ ತೊಟ್ಟಾಭರಣಮೆಲ್ಲಮಂ ಕೊಟ್ಟು ಪೋಗು".
೨. "ಎಣಿಕೊಂಡ ಕಸವರಂ ತವನಿಧಿಯಂತೆ ತವದಿರ್ದಪುದೆ"
೩. "ನೀನಲ್ತೆ ಎನ್ನ ನನ್ನಿಗೊಂಡಯ್"
೪. "ಕನ್ನಡಂ ಕತ್ತುರಿಯಲ್ತೆ?"
೫. "ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು"
೬. "ಪದ್ಯಂ ವಧ್ಯಂ ; ಗದ್ಯಂ ಹೃದ್ಯಂ"
೭. "ಇರುವವರೆಗೆ ಇದೆಲ್ಲ ಇದ್ದದ್ದೇ"
೮. 'ಎತ್ತುಗಳು ಮತ್ತು ಗಾಡಿ ಭೂಕಂಪದಲ್ಲಿ ನಾಶವಾಗಿರಲಿಲ್ಲ."
೯. "ಇದನ್ನೇ ಇರಬೇಕು ಕವಿ ಅಡಿಗರು 'ನೆಲ ಕಚ್ಚಿ ನಿಲ್ಲು' ಎಂದು ಕರೆದದ್ದು"
೧೦. "ನನ್ನ ಬದುಕಿನ ಸರ್ವನಾಶವಾದ ದಿನ ಅದು"
೧೧. "ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಿಸಬೇಕು"
೧೩. "ನಮ್ಮ ಮನೆತನದಲ್ಲಿ ಹೆಣ್ಣುಮಕ್ಕಳಿಗೆ ಮೂರ್ನಾಕು ವರ್ಷ ವಯಸ್ಸಿನಲ್ಲೇ ಮದುವೆಯಾಗಬೇಕು"
೧೪. "ಈ ಬೃಹತ್ ನಗರಕ್ಕೆ ಯಂತ್ರಚಾಲಿತ ವಾಹನಗಳೇ ಹೊಂದಿಕೊಳ್ಳಬೇಕು"
೧೫. "ಪ್ಯಾರಿಸ್ ನಗರ ಎಷ್ಟೇ ಹಿಗ್ಗಿ ಬೆಳೆದರೂ ಆಯತಪ್ಪಿ ಬೆಳೆದಿಲ್ಲ"

೧೬.“ನಾವೆಲ್ಲ ನಿನಗೆ ಕಿಂಕರರಾಗಿರುತ್ತೇವೆ”

೧೭.“ತಾವು ದಯಮಾಡಿಸಿದುದು ಸಂತಾನವಿಲ್ಲದವರಿಗೆ ಸುಪುತ್ರ ಪ್ರಾಪ್ತಿಯಾದಷ್ಟು ಆನಂದವನ್ನುಂಟುಮಾಡಿದೆ”

೧೮.“ನೀನು ಮಿಥ್ಯಾಪ್ರತಿಜ್ಞನಾಗಿ ಬಾಂಧವಸಹಿತ ಸುಖವಾಗಿರು”

## LAQ of 5m.

**ಈ ಪ್ರಶ್ನೆಗಳಿಗೆ ೮–೧೦ ವಾಕ್ಯಗಳಲ್ಲಿ ಉತ್ತರಿಸಿರಿ.**

೧. ದಶರಥನಿಗೂ ವಿಶ್ವಾಮಿತ್ರನಿಗೂ ನಡೆದ ಮಾತುಕತೆಯನ್ನು ಕುರಿತು ಬರೆಯಿರಿ.
೨. ವಿಶ್ವಾಮಿತ್ರ ಮತ್ತು ರಾಮ ಲಕ್ಷ್ಮಣರ ಪ್ರಯಾಣವನ್ನೂ ಮಾರ್ಗ ಮಧ್ಯ ನಡೆದ ಸಂಗತಿಗಳನ್ನೂ ಕುರಿತು ಬರೆಯಿರಿ.
೩. ಪ್ಯಾರಿಸ್ ನಗರದ ಪ್ರೇಕ್ಷಣೀಯ ಸುಂದರ ತಾಣಗಳನ್ನು ವರ್ಣಿಸಿರಿ.
೪. ಕಲಾದೇಗುಲವಾದ ಪ್ಯಾರಿಸ್ ಲೇಖಕರಿಗೆ ಕಂಡ ಬಗೆಯನ್ನು ಚಿತ್ರಿಸಿ.
೫. ಭಾಂವ್ರಿದೇವಿ ಬಾಲ್ಯವಿವಾಹದ ವಿರುದ್ಧ ನಡೆಸಿದ ಹೋರಾಟವನ್ನು ವಿವರಿಸಿ.
೬. ಭಾಂವ್ರಿದೇವಿ ಕತೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
೭. ಭೂಕಂಪಕ್ಕೆ ಮನುಷ್ಯ ಹೇಗೆ ಕಾರಣನಾಗಿದ್ದಾನೆ? ವಿವರಿಸಿ.
೮. ‘ಭೂಕಂಪದ ಅಂತರಂಗ’ ಪಾಠದಲ್ಲಿ ಮನುಷ್ಯನ ಜೀವನಪ್ರೀತಿ ಹೇಗೆ ವ್ಯಕ್ತವಾಗಿದೆ?
೯. ಮುದ್ದಣ ಮನೋರಮೆಯರ ಸಲ್ಲಾಪದ ಸೊಗಸನ್ನು ವಿವರಿಸಿ.
೧೦.ಸುದಾಮೆಗೆ ಒದಗಿದ ಪ್ರಾಣಾಪಾಯ ಸಂದರ್ಭ ಹಾಗೂ ಅವಳು ಕೈಗೊಂಡ ಪ್ರತಿಜ್ಞೆಯನ್ನು ವಿವರಿಸಿ.
೧೧.ಸುದಾಮೆ ತನ್ನ ಸತ್ಯವಾದಿತನವನ್ನು ಪ್ರದರ್ಶಿಸಿದ ಬಗೆಯನ್ನು ವಿವರಿಸಿ.

## MCQ OF 1 M.ಬಹು ಆಯ್ಕೆಯ ಪ್ರಶ್ನೆಗಳು :(Poetry)

**೧. ಮಾನವೀಯತೆ ಮಲಗಿದ್ದು ----**
**( ಮನೆಯಲ್ಲಿ, ಕಾಡಿನಲ್ಲಿ, ಬೀದಿಯಲ್ಲಿ, ಅರಮನೆಯಲ್ಲಿ)**
**೨. ಮಾನವೀಯತೆಯ ಸಂಗಾತಿಗಳು ಮಾಡಿದ್ದು ----**
**(ಜಗಳ, ಹೋರಾಟ, ಪಕ್ಷಾಂತರ, ನೃತ್ಯ)**
**೩. ‘ಮಾನವೀಯತೆ’ ಪದ್ಯ ಬರೆದ ಕವಯಿತ್ರಿ ---**
(ಅಕ್ಕಮಹಾದೇವಿ, ಶಾಂತಾದೇವಿ, ಕೆ.ಷರೀಫಾ, ಪಿ. ಬೇಗಂ)
೪. ಹೂಗಳ ಕಾಲದಲ್ಲಿ ಜನರು ಹೊಗಳುತ್ತಾರೆ ----
( ಕಾಯಿಯನ್ನು, ಹಣ್ಣನ್ನು, ಎಲೆಯನ್ನು, ಮರವನ್ನು)
೫. ಓದಿದರೆ ಜನರು ಕೇಳುವರು ----
(ಮತ್ತೊಮ್ಮೆ ಓದು, ಓದಿದ್ದು ಸಾಕು, ಮತ್ತೊಮ್ಮೆ ಬರೆ, ಬಾಯಿಪಾಠ ಮಾಡು)
೬. ನಿಂತರೆ ಜನರು ಹೇಳುವರು ----
(ನೀನೇಕೆ ಮಲಗಿರುವೆ, ನೀನೇಕೆ ಆಡುತ್ತಿರುವೆರುವಿ, ನೀನೇಕೆ ಓಡುತ್ತಿರುವೆ, ನೀನೇಕೆ ನಿಂತಿರುವೆ)
೭. ಡಾಂಭಿಕ ಭಕ್ತನು ಏಳುವ ಸಮಯ ----
(ಮಧ್ಯಾಹ್ನ, ನಡುರಾತ್ರಿ, ಉದಯ ಕಾಲ, ಸಾಯಂಕಾಲ)
೮. ‘ಉದರವೈರಾಗ್ಯ’ ಈ ಪದ್ಯ ಬರೆದವರು ----
(ಕನಕದಾಸ, ಪುರಂದರದಾಸ, ಜಗನ್ನಾಥದಾಸ, ಶ್ರೀಹರಿದಾಸ)
೯. ಪುರಂದರದಾಸರಿಗಿದ್ದ ಬಿರುದು ----
(ಭಾರತ ರತ್ನ, ಕರ್ನಾತಕ ಸಂಗೀತ ಪಿತಾಮಹ, ಕರ್ನಾಟಕ ರತ್ನ, ಹಿಂದೂಸ್ತಾನಿ ಸಂಗೀತ ಪಿತಾಮಹ)
೧೦.ಯೋಧ ಹೆಂಗಸನ್ನು ಕೇಳಿದ್ದು ----
(ತುಸು ಹಾಲು, ತುಸು ನೀರು, ತುಸು ಅನ್ನ, ತುಸು ತುಪ್ಪ)

೧೧.　　ಒಮ್ಮೆ ಬೀಸಿ ಬಂದ ಗಾಳಿ ----

(ತೆಂಕಣ ಗಾಳಿ,　ಮೂಡಣ ಗಾಳಿ,　ಪಡುವಣ ಗಾಳಿ,　ಬಡಗಣ ಗಾಳಿ)

೧೨.　　ಕನ್ನಡದ ಆದಿಕವಿಯ ಹೆಸರು ----

(ಮಹಾಕವಿ ಪಂಪ,　ಮಹಾಕವಿ ರನ್ನ,　ಕುಮಾರವ್ಯಾಸ,　ಕುವೆಂಪು)

೧೩.　　ಕಲಾವಿದ ಚಿತ್ರ ರಚಿಸಿದ್ದು ----

(೬ ವರ್ಷದಲ್ಲಿ,　೯ ವರ್ಷದಲ್ಲಿ,　೮ ವರ್ಷದಲ್ಲಿ,　೭ ವರ್ಷದಲ್ಲಿ)

೧೪.　　ಚಂದ್ರಬಿಂಬ ಕಣ್ಣಿಗೆ ಕಂಡಿದ್ದು ----

(ಹಣ್ಣಿನಂತೆ,　ಚೆಂಡಿನಂತೆ,　ಹೂವಿನಂತೆ,　ಕಲ್ಲಿನಂತೆ)

೧೫.　　ದೊರೆ ಹೀಗೆ ಕೂಗಿದ ----

(ಇಂದ್ರಜಾಲವಿದು,　ಬೇಗ ಬನ್ನಿ,　ಅಯ್ಯೋ ದೇವರೇ,　ರಾಮರಾಮಾ)

೧೬.　　ಭೀಷ್ಮರ ಮುಪ್ಪನ್ನು ಇದಕ್ಕೆ ಹೋಲಿಸಲಾಗಿದೆ ----

(ಜಿಂಕೆಗೆ,　ಹುಲಿಗೆ,　ಚಿರತೆಗೆ,　ಸಿಂಹಕ್ಕೆ)

೧೭.　　ಪಂಪನಿಗೆ ಆಶ್ರಯ ಕೊಟ್ಟ ದೊರೆ ----

(ಅರಿಕೇಸರಿ,　ಮಹಾಕೇಸರಿ,　ಇಮ್ಮಡಿ ಪುಲಕೇಶಿ,　ಹರ್ಷವರ್ಧನ)

೧೮.　　ಭೀಷ್ಮರ ಪ್ರಕಾರ ಯುದ್ಧದಲ್ಲಿ ಹೋರಾಡಬೇಕಾದದ್ದು ----

(ಕೃಷ್ಣನ,　ಅರ್ಜುನನ,　ದುರ್ಯೋಧನನ,　ರಾಮನ)

## SAQ of 2m.

**ಕೆಳಗಿನ ಪ್ರಶ್ನೆಗಳಿಗೆ ೨-೩ ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಮಾನವೀಯತೆಯ ಬಗ್ಗೆ ಯಾರು ಭಾಷಣ ಮಾಡುವರು?
೨. ಮಾನವೀಯತೆ ಕೊರಗಿನಿಂದ ಏನಾಗಿದೆ?
೩. ಕವಯಿತ್ರಿ ಮಾನವೀಯತೆಯ ಹತ್ತಿರ ಯಾವಾಗ ಮಾತನಾಡಿದರು?
೪. ಡಾಂಭಿಕ ಭಕ್ತನು ತನ್ನಲ್ಲಿ ಏನೇನು ತುಂಬಿಟ್ಟುಕೊಂಡಿರುತ್ತಾನೆ?
೫. ಪ್ರತಿಮೆಯು ಮಿಂಚುವುದಕ್ಕಾಗಿ ಡಾಂಭಿಕ ಭಕ್ತನು ಏನು ಮಾಡುತ್ತಾನೆ?
೬. ಡಾಂಭಿಕನು ಬಯಲು ಡಂಭವ ಹೇಗೆ ತೋರಿಸುವನು?
೭. ಹೆಂಗಸು ಯೋಧನನ್ನು ಏನೆಂದು ಸ್ವಾಗತಿಸಿದಳು?
೮. ಹಾಡನ್ನು ಕೇಳಿದ ಪಯಣಿಗ ಏನೆಂದನು?
೯. ಹೆಂಗಸು ಯೋಧನಿಗೆ ಏನೆಂದು ಹಾರೈಸಿದಳು?
೧೦.ಮಳೆ ಬಂದಾಗ ಜನರ ಟೀಕೆ ಏನು?
೧೧. ಚಳಿಗಾಲ ಬಂದಾಗ ಜನರ ಟೀಕೆ ಏನು?
೧೨. ಚಿಗುರು ಚಿನ್ನದ ನಡುವೆ ಜನರು ಏನನ್ನು ಬಯಸುವರು?
೧೩.ಕಲಾವಿದ ಕುಂಚದಿಂದ ಏನೇನು ಸೃಷ್ಟಿಸಿದ್ದನು?
೧೪.ಕಲಾವಿದನನ್ನು ದೊರೆಯು ಏನೆಂದು ಕೇಳಿದನು?
೧೫.ಕಲಾವಿದನನ್ನು ಯಾವುದು ಕೈಬೀಸಿ ಕರೆಯುತ್ತಿತ್ತು?
೧೬.ಕರ್ಣನ ದೃಷ್ಟಿಯಲ್ಲಿ ಕುಲವೆಂದರೆ ಯಾವುದು?
೧೭.ಭೀಷ್ಮನ ಪ್ರಕಾರ ಯುದ್ಧದಲ್ಲಿ ಯಾರ ಜೊತೆ ಹೋರಾಡಬೇಕಿದೆ?
೧೮.ಪಂಪ ಮಹಾಕವಿ ರಚಿಸಿದ ಎರಡು ಕೃತಿಗಳು ಯಾವವು?

## SAQ of 3m.

**ಕೆಳಗಿನ ಪ್ರಶ್ನೆಗಳಿಗೆ ೫-೬ ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಮಾನವಿಯತೆ ಯಾವ ರೀತಿಯಲ್ಲಿ ಅವಶೇಷವಾಗುತ್ತಿದೆ?

೨. ಕವಯಿತ್ರಿ ಮಾನವೀಯತೆಯನ್ನು ಕೇಳಿದ ಪ್ರಶ್ನೆಗಳು ಯಾವವು?

೩. ಕವಯಿತ್ರಿಯ ಆತ್ಮ ಸಿಡಿದೇಳಲು ಕಾರಣವೇನು?

೪. ಡಾಂಭಿಕ ಭಕ್ತನು ಘನ ಪೂಜೆಯನ್ನು ಹೇಗೆ ಮಾಡುವನು?

೫. ಊಟದ ನೆನಪು ಮಾಡಲು ಡಾಂಭಿಕ ಭಕ್ತನು ಏನು ಮಾಡುತ್ತಾನೆ?

೬. ಮುಸುಕು ಹಾಕಿಕೊಂಡು ಡಾಂಭಿಕ ಭಕ್ತನು ಏನು ಚಿಂತೆ ಮಾಡುವನು?

೭. ಹೆಂಗಸು ಯೋಧನನ್ನು ಹೇಗೆ ಉಆಪಚರಿಸಿದಳು?

೮. ಯೋಧ ತನ್ನ ಆಯಾಸವನ್ನು ಹೇಗೆ ನಿವಾರಿಸಿಕೊಂಡನು?

೯. ಹೆಂಗಸು ಹೆಸರನ್ನು ಕೇಳಿದಾಗ ಯೋಧನ ಉತ್ತರವೇನು?

೧೦.ಕಾಲಗಳ ಬಗೆಗೆ ಜನರ ಟೀಕೆಗಳೇನು?

೧೧.ನಿಂತರೆ, ಮಲಗಿದರೆ ಮತ್ತು ಓಡಿದರೆ ಜನರ ಟೀಕೆಗಳೇನು?

೧೨.ವಿದ್ಯಾರ್ಥಿಗಳಿಗೆ ಜನರು ಹೇಗೆ ಸಲಹೆ ಕೊಡುತ್ತಾರೆ?

೧೩.ಕಲಾವಿದ ಚಿತ್ರಿಸಿದ ಚಿತ್ರ ಹೇಗಿತ್ತು?

೧೪.ಕಲಾವಿದನ ಚಿತ್ರವನ್ನು ನೋಡಿದ ಜನರ ಪ್ರತಿಕ್ರಿಯೆ ಏನು?

೧೫.ಕಲಾವಿದನನ್ನು ಕರೆದ ನಿಗೂಢ ವಾತಾವರಣಹೇಗಿತ್ತು?

೧೬.ದ್ರೋಣರು ಕರ್ಣನನ್ನು ಹೇಗೆ ದೂಷಿಸಿದರು?

೧೭.ಕರ್ಣನು ಕೈಗೊಂಡ ಪ್ರತಿಜ್ಞೆ ಯಾವುದು?

೧೮.ಕರ್ಣನ ರೋಷದ ಮಾತು ಕೇಳಿದ ಭೀಷ್ಮರು ಆಡಿದ ಮಾತುಗಳು ಯಾವವು?

## LAQ of 3m.

**ಕೆಳಗಿನ ಪ್ರಶ್ನೆಗಳಿಗೆ ಸಂದರ್ಭಸಹಿತ ೬-೮ ವಾಕ್ಯಗಳಲ್ಲಿ ಉತ್ತರಿಸಿರಿ.**

೧. ''ಸತ್ಯಕ್ಕೆ ಜಯವೆಂಬ ನಿನ್ನ ವಾಕ್ಯ ಏನಾಯಿತು?

೨. ''ಈ ಕೊರಗಿನಲ್ಲಿಯೇಸೊರಗಿ ಹೋಗುತ್ತಲಿರುವೆಯಾ?''

೩. ''ನನ್ನ ಮಲಗಿರುವ ಆತ್ಮವು ಸಿಡಿದೇಳುವಂತೆ ಮಾಡಿತು''

೪. ''ಮಳೆಬಿತ್ತೋಬಿಡದಲ್ಲಶನಿ''

೫. ''ನಿನಗಿಲ್ಲ ಚಿಂತೆ''

೬. ಇವರ ಬಯಕೆಗಳೇನೋ ಇವರದ್ ಟೀಕೆ''

೭. ''ಕರದೊಳು ಜಪಮಣಿ ಬಾಯೊಳು ಮಂತ್ರವು''

೮. ''ನಾಟಕಸ್ತ್ರೀಯಂತೆ ಬಯಲ ಡಂಬವ ತೋರೆ''

೯. ''ಉದಯ ಕಾಲದಲೆದ್ದು ಗಡಗಡ ನಡುಗುತ''

೧೦.''ಬಲಲಿದಿರಿ ಪಾಪ ಬನ್ನಿರಿ ಒಳಕ್ಕೆ, ವಿಶ್ರಮಿಸಿರಿ''

೧೧.''ನೀರು ಹಣಿಸುವಿರಾ ತುಸು''

೧೨.''ಬಂದಾಗ ಬರಬೇಕು ನೀವು ಇಲ್ಲಿ''

೧೩.''ಚಂದ್ರನಲ್ಲ ಅದು ಚೆಂಡು''

೧೪.''ಇಂದ್ರಜಾಲವಿದು''

೧೫."ಆಚೆಗೇನಿದೆ? ಏನಿದೆ?"

೧೬."ನಾಲಿಗೆ ಕುಲವಂ ತಬ್ಬುವವೋಲಿರದೆ ನೀಂ ಕೆಡೆನುಡಿವೈ"

೧೭.ನಿಮ್ಮ ಕುಲವಾಕುಲಮಂ ನಿಮಗುಂಟುಮಾಡುಗುಂ"

೧೮."ಸೂಳ್ಪಡೆಯಲಪ್ಪುದು ಕಾಣಾ ಮಹಾಜಿರಂಗದೊಳ್"

## LAQ of 5m.

**ಕೆಳಗಿನ ಪ್ರಶ್ನೆಗಳಿಗೆ ೮–೧೦ ವಾಕ್ಯಗಳಲ್ಲಿ ಉತ್ತರಿಸಿರಿ.**

೧. 'ಮಾನವೀಯತೆ' ಈ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೨. ಬೀದಿಯಲ್ಲಿ ಬಿದ್ದಿರುವ ಮಾನವೀಯತೆಯನ್ನು ಕಂಡು ಕವಿ ಕೇಳಿರುವ ಪ್ರಶ್ನೆಗಳೇನು?

೩. ಕವಯಿತ್ರಿಯಾದ ಕೆ. ಷರೀಫಾರ ಮಲಗಿರುವ ಆತ್ಮ ಎಚ್ಚರಗೊಳ್ಳಲು ಕಾರಣವೇನು?

೪. 'ಇಕ್ಕಳ' ಪದ್ಯದ ಸಾರಾಂಶವನ್ನು ಬರೆಯಿರಿ.

೫. 'ಮನಮೆಚ್ಚುವಂತೆನಡೆಯಬಹುದು, ಆದರೆ ಜನಮೆಚ್ಚುವಂತೆನಡೆಯಲುಸಾಧ್ಯವಿಲ್ಲ'– ಎಂಬ ಕವಿಯ ಆಶಯವನ್ನು ತಿಳಿಸಿರಿ.

೬. ಆನರು ಯಾವ ಕಾಲದಲ್ಲಿಯೂ ಮತ್ತು ಯಾವ ಸಂದರ್ಭದಲ್ಲೂ ಸುಖವಾಗಿರಲು ಸಾಧ್ಯವಿಲ್ಲ ಏಕೆ?

೭. ಉದರ ವೈರಾಗಿಯು ತನ್ನ ಭಕ್ತಿಯನ್ನು ಹೇಗೆ ಪ್ರದರ್ಶಿಸುತ್ತಾನೆ?

೮. 'ಉದರ ವೈರಾಗ್ಯ' ಈ ಪದ್ಯದ ಸಾರಾಂಶವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.

೯. ಡಾಂಭಿಕ ವ್ಯಕ್ತಿಗಳ ಪೂಜೆಯ ವಿಧಾನವೇನು? ಮತ್ತು ಅವರ ಉದ್ದೇಶವೇನು?

೧೦.'ಯೋಧ ಮತ್ತು ಹೆಂಗಸು' ಈ ಕವನದ ಸಾರಾಂಶವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.

೧೧. ಕನ್ನಡ ನಾಡಿನ ಜನರ ಅತಿಥಿ ಸತ್ಕಾರವನ್ನು ವಿವರವಾಗಿ ಬರೆಯಿರಿ.

೧೨. ಹೆಂಗಸು ಯೋಧನನ್ನು ಉಪಚರಿಸಿದ ರೀತಿಯನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.

೧೩. ಕಲಾವಿದನ ಭಿತ್ತಿಚಿತ್ರದ ನೈಜತೆಯ ಬಗ್ಗೆ ನಿಮ್ಮ ಮಾತುಗಳಲ್ಲಿ ಬರೆಯಿರಿ.

೧೪. ರಾಜನಿಗೆ 'ಇದೊಂದು ಇಂದ್ರಜಾಲ' ಎನಿಸಿದ್ದು ಯಾವಾಗ?

೧೫. 'ಚೈನಾದ ಒಂದು ಹಳೆಯ ಕತೆ' ಈ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೧೬. ಭೀಷ್ಮನಿಗೆ ಸೇನಾಧಿಪತಿ ಪಟ್ಟ ಕಟ್ಟಿದ ಸಂದರ್ಭದಲ್ಲಿ ದ್ರೋಣ ಹಾಗೂ ಕರ್ಣರ ನಡುವೆ ನಡೆದ ಘರ್ಷಣೆಯನ್ನು ವಿವರಿಸಿರಿ.

೧೭.ಕರ್ಣನ ಮಾತಿಗೆ ಭೀಷ್ಮರು ಪ್ರಕ್ರಿಯಿಸಿದ ಬಗೆಯನ್ನು, ಅದರಿಂದ ವ್ಯಕ್ತವಾಗುವ ಅವರ ವ್ಯಕ್ತಿತ್ವವನ್ನು ಚಿತ್ರಿಸಿರಿ.

೧೮.'ಈ ಮಹಾಯುದ್ಧದಲ್ಲಿ ನಿನ್ನ ಸರದಿಯು ಬರುತ್ತದೆ ಕಾದು ನೋಡು ಕರ್ಣ' ಎಂದು ಭೀಷ್ಮರು ಹೇಳಲು ಕಾರಣವೇನು?

***********

# Classwise andTermwise Templates Design of QP

## SUB. : KANNADA CLASS :IX

| | | FA I | FA II | SA I | FA III | FA IV | SA II |
|---|---|---|---|---|---|---|---|
| ಕ್ರ.ಸಂ. | ಪಾಠಗಳು | 10 | 10 | 30 | 10 | 10 | 30 |
| | SA I (Prose)ಗದ್ಯಭಾಗ | | | | | | |
| 1 | ಪರಿವರ್ತನೆ | ✓ | | ✓ | | | |
| 2 | ಜಾರ್ಜ್ ಫರ್ಡಿನಾಂಡ್ ಕಿಟೆಲ್ | ✓ | | ✓ | | | |
| 3 | ಪ್ರತಿದಿನ ಪರಿಸರ ದಿನ | | ✓ | ✓ | | | |
| 4 | ದೊಡ್ಡಾಟ | | ✓ | ✓ | | | |
| 5 | ಸುಭಾಸ್ ಚಂದ್ರ ಬೋಸ್ | | ✓ | ✓ | | | |
| | SA II (Prose)ಗದ್ಯಭಾಗ | | | | | | |
| 6 | ತಾಟಕಾ ಸಂಹಾರ | | | | ✓ | | ✓ |
| 7 | ಕಲೆಯ ಆಗರ ಪ್ಯಾರಿಸ್ | | | | ✓ | | ✓ |
| 8 | ಬಾಲ್ಯ ವಿವಾಹವನ್ನು ತಡೆದ ಭಾಂವ್ರಿದೇವಿ | | | | ✓ | | ✓ |
| 9 | ಭೂಕಂಪದ ಅಂತರಂಗ | | | | | ✓ | ✓ |
| 10 | ಕನ್ನಡಂ ಕತ್ತುರಿಯಲ್ತೆ | | | | | ✓ | ✓ |
| 11 | ಸತ್ಯವಾದಿ ಸುದಾಮೆ | | | | | ✓ | ✓ |
| | SA I (Poetry)ಪದ್ಯಭಾಗ | | | | | | |
| 1 | ಪ್ರಾರ್ಥನಾ ಗೀತೆ | ✓ | | ✓ | | | |
| 2 | ನಮ್ಮ ಬಲ | ✓ | | ✓ | | | |
| 3 | ಮೂಡಲು ಕುಣಿಗಲ್ ಕೆರೆ | ✓ | | ✓ | | | |
| 4 | ಹಣ ಬಣ್ಣ | | ✓ | ✓ | | | |
| 5 | ಅಲ್ಲಮನ ವಚನಗಳು | | ✓ | ✓ | | | |
| 6 | ಹರಿಶ್ಚಂದ್ರನಲ್ಲದಿನ್ನಾರು ಗತಿಮತಿ | | ✓ | ✓ | | | |
| | SA II(Poetry)ಪದ್ಯ ಭಾಗ | | | | | | |
| 7 | ಮಾನವೀಯತೆ | | | | ✓ | | ✓ |
| 8 | ಉದರ ವೈರಾಗ್ಯ | | | | ✓ | | ✓ |
| 9 | ಯೋಧ ಮತ್ತು ಹೆಂಗಸು | | | | ✓ | | ✓ |
| 10 | ಚೈನಾದ ಒಂದು ಹಳೆಯ ಕಥೆ | | | | | ✓ | ✓ |
| 11 | ಇಕ್ಕಳ | | | | | ✓ | ✓ |
| 12 | ಸೂಳ್ಪಡೆಯಲಪ್ಪುದು ಕಾಣ ಮಹಾಜಿರಂಗದೊಳ್ | | | | | ✓ | ✓ |

| ಕ್ರ. ಸಂ. | Grammer ವ್ಯಾಕರಣಾಂಶ | ಅಂಕ Marks | FA I | FA II | SA I | FA III | FA IV | SA II |
|---|---|---|---|---|---|---|---|---|
| | | | 10 | 10 | 30 | 10 | 10 | 30 |
| 1 | ತತ್ಸಮ ತದ್ಭವ | 1 | ✓ | | ✓ | ✓ | | ✓ |
| 2 | ಸಮಾನಾರ್ಥಕ ಪದ | 1 | ✓ | | ✓ | ✓ | | ✓ |
| 3 | ವಾಕ್ಯರಚನೆ(ಪಡೆನುಡಿ ಅಥವಾ ನುಡಿಗಟ್ಟು) | 1 | ✓ | | ✓ | ✓ | | ✓ |
| 4 | ಲಿಂಗ | 1 | | ✓ | ✓ | ✓ | ✓ | ✓ |
| 5 | ವಚನ | 1 | | ✓ | ✓ | | ✓ | ✓ |
| 6 | ವಿರುದ್ಧಪದ | 1 | | ✓ | ✓ | | ✓ | ✓ |
| 7 | ಸಂಧಿ | 2 | ✓ | | ✓ | | | ✓ |
| 8 | ಸಮಾಸ | 2 | | ✓ | ✓ | ✓ | ✓ | ✓ |
| 9 | ಕಾಲ | 1 | ✓ | ✓ | ✓ | | | ✓ |
| 10 | ಸರ್ವನಾಮ | 1 | | ✓ | ✓ | | ✓ | ✓ |
| 11 | ಗಾದೆ ವಿಸ್ತರಣೆ | 2 | ✓ | | ✓ | ✓ | | ✓ |
| 12 | ಪತ್ರ ಲೇಖನ | 4 | ✓ | | ✓ | ✓ | | ✓ |
| 13 | ಪ್ರಬಂಧ | 6 | | ✓ | ✓ | | ✓ | ✓ |
| 14 | ಅನಾವಲೋಕನ ಗದ್ಯ | 6 | ✓ | | ✓ | ✓ | | ✓ |
| 15 | ಅನಾವಲೋಕನ ಪದ್ಯ | 6 | | ✓ | ✓ | | ✓ | ✓ |
| 16 | ಸಂಕ್ಷಿಪ್ತ ಲೇಖನ | 4 | | ✓ | ✓ | | ✓ | ✓ |

# Classwise andTermwise Templates Design of QP

**SUB. : KANNADA CLASS : X**

| | | FA I | FA II | SA I | FA III | FA IV | SA II |
|---|---|---|---|---|---|---|---|
| ಕ್ರ.ಸಂ. | ಪಾಠಗಳು | 10 | 10 | 30 | 10 | 10 | 30 |
| | **SA I (Prose) ಗದ್ಯಭಾಗ** | | | | | | |
| 1 | ನಗು ಅಳು | ✓ | | ✓ | | | |
| 2 | ತ್ಯಾಗಮಯಿ | ✓ | | ✓ | | | |
| 3 | ಶಕ್ತಿಯೇ ಜೀವನ | | ✓ | ✓ | | | |
| 4 | ನಮ್ಮ ಸೈನಿಕರು | | ✓ | ✓ | | | |
| 5 | ಮಿತ್ರಪ್ರೇಮ | | ✓ | ✓ | | | |
| | **SA II (Prose) ಗದ್ಯಭಾಗ** | | | | | | |
| 6 | ನಮ್ಮ ಭಾಷೆ | | | | ✓ | | ✓ |
| 7 | ಮನಃಪರಿವರ್ತನೆ | | | | ✓ | | ✓ |
| 8 | ಸಂಕಲ್ಪ | | | | | ✓ | ✓ |
| 9 | ನೆನಪಿನಂಗಳದಿಂದ | | | | | ✓ | ✓ |
| 10 | ಮೊಲಂ ಸಿಂಹಮಂ ಕೊಂದ ಕಥೆ | | | | | ✓ | ✓ |
| | **SA I(Poetry)ಪದ್ಯ ಭಾಗ** | | | | | | |
| 1 | ಐಕ್ಯತೆ | ✓ | | ✓ | | | |
| 2 | ಮಾತೃಭೂಮಿ | ✓ | | ✓ | | | |
| 3 | ಅರಿವು | ✓ | | ✓ | | | |
| 4 | ನಿನಗೇಕೆ ಸಾಹಸದಾಡಂಬರ | | ✓ | ✓ | | | |
| 5 | ಶರಣೆಯರ ಭಾವಸಂಗಮ | | ✓ | ✓ | | | |
| | **SA II(Poetry)ಪದ್ಯ ಭಾಗ** | | | | | | |
| 6 | ನಿರ್ಮಲ ಚಿತ್ತ | | | | ✓ | | ✓ |
| 7 | ಗುರುವರಿಯದನೆ ಮರುಳ | | | | ✓ | | ✓ |
| 8 | ರಸಬಳ್ಳಿ | | | | ✓ | | ✓ |
| 9 | ಕಾಲಾಗ್ನಿ ರುದ್ರಂ ಪೊರಮಡುವವೊಲ್ | | | | | ✓ | ✓ |
| 10 | ಕನ್ನಡನಾಡ ಸಿರಿ | | | | | ✓ | ✓ |

| ಕ್ರ. ಸಂ. | Grammer ವ್ಯಾಕರಣಾಂಶ | ಅಂಕ Marks | FA I | FA II | SA I | FA III | FA IV | SA II |
|---|---|---|---|---|---|---|---|---|
| | | 40 | 10 | 10 | 30 | 10 | 10 | 30 |
| 1 | ನಾನಾರ್ಥ | 1 | ✓ | | ✓ | ✓ | | ✓ |
| 2 | ಸಮಾಸ | 2 | ✓ | | ✓ | ✓ | | ✓ |
| 3 | ಸಂಧಿ | 2 | | ✓ | ✓ | | ✓ | ✓ |
| 4 | ತತ್ಸಮ ತದ್ಭವ | 1 | | ✓ | ✓ | | ✓ | ✓ |
| 5 | ವಾಕ್ಯ ರಚನೆ | 1 | ✓ | | ✓ | ✓ | | ✓ |
| 6 | ಸಮನಾರ್ಥಕ, ವಿರುದ್ಧ ಪದ | 1 | | ✓ | ✓ | | ✓ | ✓ |
| 7 | ಜೋಡಿಪದ | 1 | ✓ | | ✓ | ✓ | | ✓ |
| 8 | ದ್ವಿರುಕ್ತಿ, ಅನುಕರಣವಾಚಕ | 1 | ✓ | | ✓ | ✓ | | ✓ |
| 9 | ವಿಭಕ್ತಿ ಪ್ರತ್ಯಯ | 1 | | ✓ | ✓ | | ✓ | ✓ |
| 10 | ಹೋಲಿಕೆ ಪದ | 1 | | ✓ | ✓ | | ✓ | ✓ |
| 11 | ಗಾದೆ ವಿಸ್ತರಣೆ | 2 | ✓ | | ✓ | ✓ | | ✓ |
| 12 | ಪತ್ರ (ಕಛೇರಿ ಪತ್ರ) | 4 | ✓ | | ✓ | ✓ | | ✓ |
| 13 | ನಿಬಂಧ | 6 | | ✓ | ✓ | | ✓ | ✓ |
| 14 | ವರದಿ | 4 | | ✓ | ✓ | | ✓ | ✓ |
| 15 | ಗದ್ಯ (ಅನಾವಲೋಕನ) | 6 | ✓ | | ✓ | ✓ | | ✓ |
| 16 | ಪದ್ಯ (ಅನಾವಲೋಕನ) | 6 | | ✓ | ✓ | | ✓ | ✓ |